Jor-273
T-P-2

R No KRNN 12 — 13-4-74

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂವೇಶಿದ ಪತ್ರಿಕೆ

First Golden Jubilee Celebrated Paper in The State

★★ Now in 57 th Year ★★

'Satyavadi' daily, Mysore 4

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | 3 ಸಂ.

ವಿಶ್ವ ಬ್ಯಾಂಕಿನಿಂದ ಭಾರತಕ್ಕೆ ಸಾಲ

ಟೌನ್ ಮುನಿಸಿಪಾಲಿಟಿ ರದ್ದು ಪಡಿಸಲು ಮನವಿ

ಹಾನಗಲ್— ಇಲ್ಲಿಯ ಟೌನ್ ಮುನಿಸಿಪಾಲಿಟಿಯನ್ನು ರದ್ದು ಪಡಿಸಿ ಸರಕಾರ ವಹಿಸಿಕೊಳ್ಳುವಂತೆ ತಾಲ್ಲೂಕು ಕಾಂಗ್ರೆಸ್ ಸಮಿತಿಯು ಪ್ರಾಂತಾಡಳಿತ ಸಚಿವರಲ್ಲಿ ವಿನಂತಿಸಿದೆ.

★

ರಷ್ಯಾದ ವಿನಂತಿ ತಿರಸ್ಕಾರ

ಕಾನಬೆರ— ಆಸ್ಟ್ರೇಲಿಯಾದಲ್ಲಿ ಜಂಟಿ ವಿಜ್ಞಾನ ಬಹಿರಾಕಾಶ ಪರಿಶೀಲನೆ ಸ್ಟೇಷನ್ ಸ್ಥಾಪಿಸಲು ರಷ್ಯಾ ಮಾಡಿದ ವಿನಂತಿಯನ್ನು ಆಸ್ಟ್ರೇಲಿಯಾ ಸರಕಾರ ತಿರಸ್ಕರಿಸಿದೆ

ಅಖಿಲ ಭಾರತ ಜನಪ್ರಿಯ ಸ್ಪರ್ಧೆ

ಪ್ರವೇಶ ಶುಲ್ಕ ಇಲ್ಲ — ನೀವು ಒಂದು ಬಹುಮಾನ ಗಳಿಸಲೇಬೇಕು

ಸಹಾಯಕ್ಕೆ ಮಾದರಿ ಮೊತ್ತ 36

11	10	15
16	12	8
9	14	13

ಮೊದಲನೆ ಬಹುಮಾನ : ವೆಸ್ಪ ಸ್ಕೂಟರ್ ಅಥವಾ ಟೆಲಿವಿಷನ್ ಅಥವಾ ರೆಫ್ರಿಜರೇಟರ್. 2 ನೇ ಬಹುಮಾನ : ಒಂದು ಟೇಪ್ ರೆಕಾರ್ಡರ್ ಅಥವಾ ಆಟೋಮ್ಯಾಟಿಕ್ ಕ್ಯಾಮರಾ 3 ನೇ ಬಹುಮಾನ : (100) ಯಾ ಪಿಕ ಜಸಾನ್ ಮಾದರಿ 4 ಬ್ಯಾಂಡ್ ಆಲ್ ವರ್ಲ್ಡ್ ಟ್ರಾನ್ಸಿಸ್ಟರ್ ಬೆಲೆ ರೂ. 275/- ಇದರ ಅರ್ಧ ಬೆಲೆ ಮೇಲೆ. ಪ್ರತಿ ಕುಟುಂಬಕ್ಕೆ ಜೀವಾವಧಿ ಕಾಣಿಕೆ.

ಪ್ರೇರಕರ ತೀರ್ಮಾನ ಕಡೆಯದು

ಖಾಲಿ ಚೌಕಗಳಲ್ಲಿ 9 (ಒಂಬತ್ತು) ರಿಂದ 17 (ಹದಿನೇಳು) ರವರೆಗೆ ಸಂಖ್ಯೆಗಳನ್ನು ಉದಯೋಗಿಸಿರಿ ಅವನ್ನು ಮೇಲಿನಿಂದ ಕೆಳಗೆ, ಅಡ್ಡಲಾಗಿ, ಮೂಲೆಯಿಂದ ಕೂಡಿದಲ್ಲಿ ಮೊತ್ತ 39 (ಮೂವತ್ತೊಂಬತ್ತು) ಆಗಬೇಕು. ಒಂದು ಸಂಖ್ಯೆಯನ್ನು ಒಂದು ಬಾರಿ ಮಾತ್ರ ಉದಯೋಗಿಸಬೇಕು ಪ್ರವೇಶಗಳಿಗೆ ಖಾಲಿ ಕಾಗದ ಉದಯೋಗಿಸಬೇಕು. ಬಹುಮಾನ ಗಳಿಸಿದವರು ಅಂಚೆವೆಚ್ಚ, ಪ್ಯಾಕಿಂಗ್ ಮತ್ತು ಲೈಸನ್ಸ್ ಶುಲ್ಕ ಕೊಡಬೇಕು. ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಪ್ರವೇಶಗಳನ್ನು ಕಳುಹಿಸಬೇಕು ಫಲಿತಾಂಶಕ್ಕಾಗಿ 45 ಪೈಸೆ ಸ್ಟಾಂಪ್ ಕಳುಹಿಸಬೇಕು. ಕಡೇ ತಾರೀಖು 5-5-74 ಫಲಿತಾಂಶ ತಾರೀಖು 7-5-74

Dire tor — BAJAJ ENTERPRISES
P O Box No 1264 DELHI-6

ಪ್ರವಾಸ ಅಭಿವೃದ್ಧಿ

ಬೆಂಗಳೂರು— ಕರ್ನಾಟಕ ಪ್ರವಾಸ ಅಭಿವೃದ್ಧಿ ಕಾರ್ಪೊರೇಷನ್ನು ಮುಂದಿನ ಐದು ವರ್ಷಗಳಲ್ಲಿ ರೂ 5 ಕೋಟಿ ಆರ್ಥಿಕ ನೆರವನ್ನು ಕೇಂದ್ರದಿಂದ ಬಯಿಸಿದೆ, ತನ್ನ ಸ್ಕೀಂಗಳನ್ನು ಜಾರಿಮಾಡಲು, ಎಂದು ಕಾರ್ಪೊರೇಷನ್ ಅಧ್ಯಕ್ಷರೂ ಶ್ರೀ ಆಜೀಜ್ ಸೇಟ್ ರವರು ಪತ್ರಿಕೆಯವರಿಗೆ ತಿಳಿಸಿದರು — ಪಶ್ಚಿಮ ತೀರದಾದ್ಯಂತ ಮತ್ತು ಬೆಟ್ಟಗಳಲ್ಲಿ ಆಶ್ರಯಗಳನ್ನೂ, ವನ್ಯಜೀವಿಗಳ ಧಾಮಗಳಲ್ಲಿ ವಸತಿ ಮತ್ತು ಹೋಟಲುಗಳನ್ನು ನಿರ್ಮಿಸುವುದು ಕಾರ್ಪೊರೇಷನ್ನಿನ ಯೋಜನೆಗಳಲ್ಲಿ ಒಂದಾಗಿದೆ ಎಂದು ಹೇಳಿದರು — ಈಗ ಮೂರು ಲಗ್ಜುರಿ ಬಸ್ಸುಗಳಿವೆಯೆಂದೂ, ಜುಲೈ 73 ರಿಂದ ಮಾರ್ಚ್ 74 ರ ಕಡೆವರೆಗೆ ರೂ 15 ಲಕ್ಷ ನಿವ್ವಳ ನಫೆ ದೊರೆತಿರುವದೆಂದೂ ಕ್ರಮೇಣ 12 ಲಗ್ಜುರಿ ಬಸುಗಳನ್ನು ಹೊಂದುವ ಯೋಚನೆ ಇವೆಯೆಂದೂ ಹೇಳಿದರು.

ಹೆಂಗಸರನ್ನು ಪೀಡಿಸಿದ್ದಕ್ಕೆ

ಬೆಂಗಳೂರು — ಕರಗದ ದಿನ ಧರ್ಮರಾಯ ದೇವಸ್ಥಾನದ ಹತ್ತಿರ ಹೆಂಗಸರನ್ನು ಪೀಡಿಸಿದ 20 ಮಂದಿಯನ್ನು ಬಂಧಿಸಲಾಯಿತು

ಬೆಂಗಳೂರು — ಎಲ್ಲಾ ಭ್ರಷ್ಟಾಚಾರ ಮಂತ್ರಿಗಳನ್ನೂ ಮೇಲಕ್ಕೆತ್ತಿ ಜೈಲಿಗೆ ಹಾಕುವುದು ತಲ್ಲಣಗೊಳಿಸುವ ಚಿಕಿತ್ಸೆ ಎಂದು ಕಮ್ಯೂನಿಸ್ಟ್ ನಾಯಕ ಶ್ರೀ ಡಿಂಗ ಹೇಳಿದರು.

ವಿಶ್ವ ಬ್ಯಾಂಕಿನಿಂದ ಸಾಲ

ನವದೆಹಲಿ— ಭಾರತವು ಕೈಗಾರಿಕ ಆಮದುಗಳಿಗೆ ವಿಶ್ವ ಬ್ಯಾಂಕಿನಿಂದ 15[illegible] ರಿಂದ 175 ಮಿಲಿಯ ಡಾಲರುಗಳ ಸಾ[illegible] ಪಡೆಯುವ ಸಂಭವನವಿದೆ.

★

ಅಕ್ಕಿ ಮಾರಾಟ

ಹುಬ್ಬಳ್ಳಿ— ದಪ್ಪ ಮತ್ತು ಮಧ್ಯಮ ಅಕ್ಕಿಯನ್ನು ಕೆಜಿಗೆ ರೂ. 3 ಕ್ಕೆ ಹೆಚ್ಚಿ[illegible] ದಂತೆ ಮಾರಲು ಚಿಲ್ಲರೆ ಆಹಾರಧಾನ್ಯ ವ್ಯಾಪಾರಿಗಳು ನಿರ್ಧರಿಸಿರುವರು

★

ಹಣವಿಲ್ಲ

ಮಹಬೂಬನಗರ— ಸರಕಾರದ ಆರ್ಥಿಕ ಸ್ಥಿತಿ ಉತ್ತಮಗೊಳ್ಳದೆ ಉಪಾಧ್ಯಾಯರ ಸಂಬಳ ಹೆಚ್ಚಿಸಲು ಸಾಧ್ಯವಿಲ್ಲವೆಂದು ಆಂಧ್ರ ವಿದ್ಯಾ ಮಂತ್ರಿ ಶ್ರೀ ಎಂ. ವಿ. ಕೃಷ್ಣಂರಾವ್ ಹೇಳಿದರು.

★

ಕಾರ್ಡು ತಲಪಲು 31 ವರ್ಷ

ಜಾಬಲಪುರ — ಕಾರ್ವಾನ ಪಟ್ಟಣದಲ್ಲಿ 1943 ನೇ ಆಗಸ್ಟ್ 12 ರಂದು ಒಬ್ಬ ಅಡ್ವೊಕೇಟರು ಸಾಗರ್ ನಗರದ ಒಬ್ಬ ವ್ಯಾಪಾರಿಗೆ ಹಾಕಿದ ಒಂದು ಕಾರ್ಡು ಈಗ ತಾ॥ 11 ರಂದು ತಲುಪಿತು — 100 ಮೈಲಿ ಪ್ರಯಾಣಕ್ಕೆ 31 ವರ್ಷ !

★

ಹಣದುಬ್ಬರ

ವಾಷಿಂಗ್ಟನ್— ಭಾರತದ ಹಣದುಬ್ಬರದರವು ವಿಶ್ವದಲ್ಲೇ ಅತಿ ಹೆಚ್ಚೆಂದು ಅಂತರರಾಷ್ಟ್ರೀಯ ಹಣಕಾಸಿನ ನಿಧಿಯ ಅಂಕಿ ಅಂಶ ತಿಳಿಸುತ್ತದೆ.

★

ಬೆಲೆ ಏರಿಕೆ

ನವದೆಹಲಿ— ಅನೇಕ ಬಾಬುಗಳ ಬೆಲೆ ಏರಿ ಜನವರಿ ಕಡೆಯೊಳಗಿನ 4 ತಿಂಗಳಲ್ಲಿ ಬಳಕೆದಾರರ ಬೆಲೆ ಸೂಚಿ 10 ಪಾಯಿಂಟ್ ಹೆಚ್ಚಿದೆ.

ಬೆಳಿಗಳನ್ನೇ ಅರಿಯದ ಜನಾಂಗ – ಬುಷ್‌ಮನ್‌ರು

ಸುಮಾರು 12000 ಮತ್ತು 15000 ವರ್ಷಗಳ ಹಿಂದೆ – ಇವೆರಡರ ನಡುವಣ ಅಂತರದಲ್ಲಿ – ಬುಷ್‌ಮೆನ್ನರು ಮೊದಲು ಜಾರಿಗೆ ಆಫ್ರಿಕಾದಲ್ಲಿ ಕಾಣಿಸಿಕೊಂಡರು ; ಜೀವನೋಪಾಯಕ್ಕಾಗಿ ಬೇಟೆಯನ್ನಾಡುತ್ತಿದ್ದ ಮತ್ತು ಹಣ್ಣು ಹಂಪಲುಗಳನ್ನು ಸಂಗ್ರಹಿಸುತ್ತಿದ ಈ ಅಲೆಮಾರಿ ಜನರು ಬಹು ಕಾಲ ಕೇವ್ ಆಫ್ ಗುಡ್ ಹೋಪ್ ನಿಂದ ಹಿಡಿದು ಅಕೆಂಜ್ ರಿವರ್ ಮತ್ತು ಬೋಟ್ಸ್‌ವಾನಾಗಳ ವರೆಗೆ ಹರಡಿಕೊಂಡಿದ್ದ ವಿಶಾಲ ಪ್ರದೇಶದ ಒಡೆಯರಾಗಿದ್ದರು ; ದಕ್ಷಿಣ ಕಡೆಯಿಂದ ಬಿಳಿಯ ವಸಾಹತುಷಾಹಿಗಳೂ ಹಾಗೂ ಉತ್ತರದ ಕಡೆಯಿಂದ ಬಂಟೂಬುಡಕಟ್ಟಿನವರೂ ಇವರನ್ನು ಅಟ್ಟಿಸಿಕೊಂಡು ಬಂದಂತೆ ಕೊನೆಗೆ ಕೆಲಹಾನ್ ನದಿಯಾಚಗೆ ಬಂದು ಸೇರಿಕೊಂಡರು ಮತ್ತು ಇಂದಿಗೂ ಅವರು ಅಲ್ಲಿಯೇ ವಾಸಿಸುತ್ತಿದ್ದಾರೆ.

ಇವರು ಎಂದೂ ಬೆಳೆ ತೆಗೆದವರಲ್ಲ, ಜಾನುವಾರುಗಳನ್ನು ಸಾಕಿದವರಲ್ಲ ; ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಲೇ ಇರುತ್ತಾರೆ.

ಕಾಡುಪ್ರಾಣಿಗಳನ್ನು ಬೇಟೆಯಾಡುವದೇ ಅಲ್ಲದೆ ಇವರು ಕಂದಮೂಲಗಳನ್ನೂ, ಉಸರವಳ್ಳಿ ಮತ್ತು ದೈತ್ಯ ನೊಣ ಮುಂತಾದವುಗಳನ್ನೂ ಅರಿಸಿಕೊಂಡು ಹೋಗುತ್ತಾರೆ.

ಬುಷ್‌ಮೆನ್‌ರ ಭಾಷೆಯಲ್ಲಿ ಬೈಗಳು ಇಲ್ಲ ; ಬೇರೆಯವರ ಬಗ್ಗೆ ಕಾಳಜಿ ಮಾಡುವುದು ಅಂತಃಕರಣದಿಂದ ನಡೆದುಕೊಳ್ಳುವುದು ಇವರ ಗುಣ ವಿಶೇಷ ; ಕಳ್ಳತನ ಅಥವಾ ಬೇರಾವುದೇ ರೀತಿಯ ಅಪರಾಧಗಳನ್ನು ಅವರು ಅರಿಯರು ; ಅವರಲ್ಲಿ ಖಾಸಗೀ ಆಸ್ತಿ ಇಲ್ಲ ; ಆಹಾರವಿದ್ದರೆ ಎಲ್ಲರೂ ಹಂಚಿಕೊಂಡು ಉಣ್ಣುತ್ತಾರೆ, ಇಲ್ಲದಿದ್ದರೆ ಎಲ್ಲರೂ ಉಪವಾಸವಿರುತ್ತಾರೆ.

ಭಾರತದಲ್ಲಿ ಗೋವಧೆ



ಪೂರ್ಣ ನಿಷೇಧವಾಗಲಿ

Protect the Cow

Help The Gorakshana

— Humanitarian Propoganda Monthly —

Contribute Liberally

to the National Defence Fund

ವುಡ್‌ಲಾಂಡ್ಸ್ 12 4 74 ರಿಂದ

ಅಮೋಘ 3 ನೇ ವಾರ

ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ಅಪೆರಾ 12 4 74 ರಿಂದ

ಕರುಳಿನ ಕರೆ

ಪಾತ್ರ – ರಾಜಕುಮಾರ್ ಕಲ್ಪನ ಒಂದು ವಾರ ಹಾತ್ರ

ಅಮೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S. Krishna Rao (Proprietor) at the Saivavadi Press, Chamarajapuram Mysore